<u>**ಪತ್ರಿಕಾ ಪ್ರಕಟಣೆ**</u>

## ಮೀನು ಸಾಗಣೆಯ ವಾಹನದಲ್ಲಿ ಶಾಸನಬದ್ಧ ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ ತೆರಿಗೆ ವಂಚಿತ ಅಡಿಕೆಯ ಪತ್ತೆ

ಮಂಗಳೂರಿನ ಜಾರಿ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಮಾಹಿತಿಯಂತೆ ಉಡುಪಿಯ ಜಾರಿ ವಿಭಾಗದ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು ಹಾಗೂ ಚುನಾವಣಾ ಸಂಹಿತೆ ಜಾರಿಗಾಗಿ ಕರ್ನಾಟಕದ ಉಡುಪಿ ಜಿಲ್ಲೆಯ ಹೆಜಮಾಡಿಯಲ್ಲಿ ಸ್ಥಾಪಿತವಾಗಿರುವ ವಿಚಕ್ಷಣಾ ದಳದ ಅಧಿಕಾರಿಗಳು ಮೀನು ಸಾಗಿಸುತ್ತಿದ್ದ ಸರಕು ವಾಹನ ಸಂಖ್ಯೆ: ಕೆಎ 19 ಎಎ 1477ನ್ನು ದಿನಾಂಕ: 23.03.2019ರಂದು ತಡೆ ಹಿಡಿದು, ಈ ವಾಹನದಲ್ಲಿ ಮೀನಿನ ಬದಲಾಗಿ ದಾಖಲೆಗಳಿಲ್ಲದ ನೂರು ಅಡಿಕೆ ಚೀಲಗಳನ್ನು ಸಾಗಿಸುತ್ತಿದ್ದುದನ್ನು ಕಂಡು ಹಿಡಿದಿರುತ್ತಾರೆ. ಸರಕು ಸಾಗಾಣಿಕೆದಾರರು / ತೆರಿಗೆದಾರರು ಈ ಪ್ರಕರಣದಲ್ಲಿ ತೆರಿಗೆ ವಂಚಿತ ಅಡಿಕೆಯನ್ನು ರಾಜ್ಯದ ಹೊರಗೆ ಸಾಗಿಸಲು ಉಪಯೋಗಿಸುತ್ತಿದ್ದ ವಿಧಾನ ಇದಾಗಿರುತ್ತದೆ. ಈ ಬಗ್ಗೆ ಮುಂದಿನ ತನಿಖೆಗಳು ಜಾರಿಯಲ್ಲಿರುತ್ತವೆ.





ಜಿ.ಎಸ್.ಟಿ. ಕಾನೂನಿನಲ್ಲಿ ಬರುವ ಎಲ್ಲಾ ತೆರಿಗೆದಾರರಿಗೆ ಹಾಗೂ ಸರಕು ಸಾಗಾಣಿಕೆದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ತೆರಿಗೆ ವಂಚನೆಯ ಚಟುವಟಿಕೆಗಳಲ್ಲಿ ತೊಡಗುವವರ ವಿರುದ್ಧ ಕಟ್ಟುನಿಟ್ಟಾದ ದಂಡನಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಲು ಇಲಾಖೆಯು ಕ್ರಮಗಳನ್ನು ಕೈಗೊಳ್ಳುತ್ತದೆ. ವಾಣಿಜ್ಯ ತೆರಿಗೆಗಳ ಇಲಾಖೆಯು ಇಂತಹ ಸರಕುಗಳ ಸಾಗಣೆಯನ್ನು ಮುಂದೆಯೂ ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ.

(ಶ್ರೀಕರ್.ಎಂ.ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು.

Scanned by CamScanner